**ಕರ್ನಾಟಕ ಸರ್ಕಾರ**

**ಸಂಖ್ಯೆ:** ಡಿಟಿಇ 37 ಬಿಎಲ್‌ಡಿ 2011
**ಅಡಕ:**

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:11-11-2020.

**:ಸುತ್ತೋಲೆ :**

**ವಿಷಯ:** ಸರ್ಕಾರಿ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ಯಾಂಟೀನ್‌ಗಳ ಮಾಹಿತಿ ನೀಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಪತ್ರ ಸಂಖ್ಯೆ: ಇಡಿ 07 ಹೆಚ್‌ಪಿಯು 2019 ದಿನಾಂಕ:03-11-2020.

----------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಸರ್ಕಾರದವರು ರಾಜ್ಯದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಎಷ್ಟು ಕ್ಯಾಂಟಿನ್‌ಗಳು ಕಾರ್ಯನಿರ್ವಹಿಸುತ್ತಿವೆ? ಎಲ್ಲೆಲ್ಲಿ? ಅವುಗಳ ಮಾಸಿಕ ಬಾಡಿಗೆಯನ್ನು ಯಾರ ಖಾತೆಗೆ ಜಮಾ ಮಾಡಲಾಗುತ್ತಿದೆ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ನೀಡಲು ತಿಳಿಸಿರುತ್ತಾರೆ.

ಈ ದಿಸೆಯಲ್ಲಿ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಸರ್ಕಾರಕ್ಕೆ ಮಾಹಿತಿಯನ್ನು ನೀಡುವ ಸಂಬಂಧ ಕೆಳಕಂಡ ಅಂಶಗಳಿಗೆ 20-11-2020ರೊಳಗೆ ಕಡ್ಡಾಯವಾಗಿ ಮಾಹಿತಿ/ವರದಿಯನ್ನು ಅಗತ್ಯ ದಾಖಲಾತಿಗಳೊಂದಿಗೆ ನೀಡಲು ಸೂಚಿಲಾಗಿದೆ.

1. ಸಂಸ್ಥೆಯಲ್ಲಿ ಕ್ಯಾಂಟೀನ್ ನಡೆಸಲಾಗುತ್ತಿದೆಯೇ? [ಹೌದು / ಇಲ್ಲ]
2. ಉಪಾಹಾರ ಗೃಹದ ವಿಸ್ತೀರ್ಣವೆಷ್ಟು?
3. ಮಾಸಿಕ ಬಾಡಿಗೆ ಮೊತ್ತವೆಷ್ಟು? [ಲೋಕೋಪಯೋಗಿ ಇಲಾಖೆಯಿಂದ ಬಾಡಿಗೆ ನಿಗಧಿಯಾದ ಪತ್ರ ಲಗತ್ತಿಸುವುದು]
4. ಮಾಸಿಕ ಬಾಡಿಗೆ ಮೊತ್ತವನ್ನು ಯಾರ ಖಾತೆಗೆ ಜಮೆಯಾಗುತ್ತಿದೆ. (ವಿವರಣೆ ನೀಡುವುದು ಮತ್ತು ದಾಖಲೆ ನೀಡುವುದು]
5. ಸರ್ಕಾರಿ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಉಪಾಹಾರವನ್ನು ಒದಗಿಸಲಾಗುತ್ತಿದೆಯೇ?
6. ಸಂಸ್ಥೆಯಲ್ಲಿ ಕ್ಯಾಂಟೀನ್ ನಡೆಸಲು ಸರ್ಕಾರದಿಂದ / ಇಲಾಖೆಯಿಂದ ಪಡೆದ ಅನುಮತಿ ಪತ್ರವನ್ನು ಲಗತ್ತಿಸುವುದು.

ಈಮೇಲ್ ವಿಳಾಸ: dte.bld@gmail.com

ತಮ್ಮ ವಿಶ್ವಾಸಿ,

**ಜಂಟಿ ನಿರ್ದೇಶಕರು [ಆಡಳಿತ]**
**ತಾಂತ್ರಿಕ ಶಿಕ್ಷಣ ಇಲಾಖೆ.**

ಇವರಿಗೆ:

1. ಪ್ರಿನ್ಸಿಪಾಲರು, ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜು ಅಗತ್ಯ ಕ್ರಮಕ್ಕೆ.
2. ಇ-ಆಡಳಿತ ವಿಭಾಗಕ್ಕೆ - ಇಲಾಖಾ ಜಾಲ ತಾಣದಲ್ಲಿ ಪ್ರಚುರಪಡಿಸುವುದು.